ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1642**
ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	**20-03-2020**

ಕ್ರ ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ವಿತರಿಸಲಾದ ಬಾಂಡ್‌ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು: ವರ್ಷಾವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ವಿತರಿಸಲಾದ ಬಾಂಡ್‌ಗಳ ಸಂಖ್ಯೆ ಈ ಕೆಳಕಂಡಂತಿದೆ. (see table below)
ಆ	ಈ ಯೋಜನೆಯಡಿ ಫಲಾನುಭವಿಗಳಿಗೆ ವಿತರಿಸಬೇಕಾದ ಬಾಂಡ್‌ಗಳ ಸಂಖ್ಯೆ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ನೋಂದಣಿಯಾಗಿರುವ **5,557** ಫಲಾನುಭವಿಗಳಿಗೆ ಬಾಂಡುಗಳನ್ನು ವಿತರಿಸಬೇಕಾಗಿದೆ.
ಇ	ಬಾಂಡ್‌ಗಳನ್ನು ವಿತರಿಸಬೇಕಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು:	ಬಂದಿದೆ. 2019-20ನೇ ಸಾಲಿನಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ಅನುದಾನ ಬಿಡುಗಡೆ ವಿಳಂಬವಾಗಿರುತ್ತದೆ. ಜನವರಿ-2020ರ ಮಾಹೆಯಲ್ಲಿ ಒಟ್ಟು 292.50 ಕೋಟಿ ಅನುದಾನವನ್ನು ಎಲ್.ಐ.ಸಿಗೆ ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ 1,50,569 ಬಾಂಡುಗಳು ಮುದ್ರಣದ ಹಂತದಲ್ಲಿರುತ್ತವೆ.
ಈ	ಯಾವ ಕಾಲಮಿತಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)	ಎಲ್.ಐ.ಸಿಯಲ್ಲಿ ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ 5,557 ಬಾಂಡುಗಳು ಮುದ್ರಣದ ಹಂತದಲ್ಲಿದ್ದು, ಮುದ್ರಣಗೊಂಡ ಕೂಡಲೇ ಫಲಾನುಭವಿಗಳಿಗೆ ಬಾಂಡ್ ವಿತರಿಸಲು ಬೀದರ್ ಜಿಲ್ಲೆಗೆ ಬಾಂಡ್‌ಗಳನ್ನು ರವಾನಿಸಲಾಗುವುದು.

ತಾಲ್ಲೂಕು / ವರ್ಷ	2016-17	2017-18	2018-19
ಬೀದರ	1700	2257	1410
ಭಾಲ್ಕಿ	1306	1917	835
ಬಸವ ಕಲ್ಯಾಣ	1309	1262	749
ಹುಮನಾಬಾದ	1159	1002	783
ಸಂತಪೂರ (ಔ)	992	1103	724
ಒಟ್ಟು	**6446**	**7541**	**4501**

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ : ಮಮಇ 52 ಮಮಅ 2020